(ಆ) ೮೧.೯೪ ಕೋಟಿ ರೂಪಾಯಿಗಳು (ತಾತ್ಕಾಲಿಕ) (೧೯೮೯ನೇ ಏಪ್ರಿಲ್‌ನಿಂದ ಫೆಬ್ರುವರಿ ೧೯೯೦ರ ವರೆಗೆ)

ಮಾರಾಟ ಕರ ವಸೂಲಿ ಬಗ್ಗೆ

೩೭೮ ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು)—ಮಾನ್ಯ ಆರ್ಥಿಕ ಸಾಂಖ್ಯಿಕ, ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಒಟ್ಟು ಮಾರಾಟ ತೆರಿಗೆ ಮೊತ್ತವೆಷ್ಟು ?

ಆ) ಈ ತೆರಿಗೆಯನ್ನು ಮಾರಾಟ ಹಂತದಲ್ಲಿ ಹಾಕದೇ ಉತ್ಪಾದನಾ ಹಂತದಲ್ಲಿ ಹಾಕಿದರೆ ಮಾರಾಟ ತೆರಿಗೆಯು ಎಷ್ಟಾಗುತ್ತಿತ್ತು ?

ಶ್ರೀ ಎಂ. ರಾಜಶೇಖರ ಮೂರ್ತಿ (ಆರ್ಥಿಕ ಸಚಿವರು).—

ಅ) ರಾಜ್ಯದ ಒಟ್ಟು ಮಾರಾಟ ತೆರಿಗೆಯ ಮೊತ್ತ ಈ ಕೆಳಗೆ ತೋರಿಸಿದಂತಿದೆ.

ಆರ್ಥಿಕ ವರ್ಷ	ಮೊತ್ತ (ಕೋಟಿ ರೂಪಾಯಿಗಳಲ್ಲಿ)
೧೯೮೮-೮೯ (ಲೆಕ್ಕ)	೮೫೯.೫೦
೧೯೮೯-೯೦ (ಬಜೆಟ್ ಅಂದಾಜು)	೮೭೫.೦೦
೧೯೮೯-೯೦ (ಪರಿಷ್ಕೃತ ಅಂದಾಜು)	೯೦೪.೦೦
೧೯೯೦-೯೧ (ಬಜೆಟ್ ಅಂದಾಜು)	೧೦೧೫.೦೦

ಆ) ಉತ್ಪಾದನಾ ಹಂತದಲ್ಲಿ ಹಾಕುವ ತೆರಿಗೆಗೆ ಉತ್ಪಾದನಾ (ಎಕ್ಸೈಜ್) ಶುಲ್ಕ ಎನ್ನುತ್ತಾರೆ. ಪಾದಕಪೇಯ ವಸ್ತುಗಳ ಹೊರತಾಗಿ ಎಲ್ಲಾ ವಸ್ತುಗಳ ಮೇಲೆ ಉತ್ಪಾದನಾ ತೆರಿಗೆ (ಎಕ್ಸೈಜ್) ಹಾಕುವ ಅಧಿಕಾರ ಕೇವಲ ಕೇಂದ್ರ ಸರ್ಕಾರಕ್ಕೆ ಇದೆ.

ಮಾರಾಟ ಕರವನ್ನು ವಸ್ತುಗಳು ಮಾರಾಟವಾದಾಗ ಅಥವಾ ಖರೀದಿಸಿದಾಗ ಮಾತ್ರ ಹಾಕಬಹುದು ಉತ್ಪಾದಿತ ಪ್ರಮಾಣಗಳ ಆಧಾರದಿಂದ ಹಾಕಲಾಗುವುದಿಲ್ಲ.

ಕರ್ನಾಟಕ ಹಣಕಾಸು ನಿಗಮದ ಬಗ್ಗೆ

೩೦೭ ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಆರ್ಥಿಕ ಸಾಂಖ್ಯಿಕ, ಸಾಂಖ್ಯಿಕ ಹಾಗೂ ಆಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕರ್ನಾಟಕ ರಾಜ್ಯ ಹಣಕಾಸು ನಿಗಮವು ಎಷ್ಟು ಉದ್ದಿಮೆಗಳಲ್ಲಿ ಹಣ ತೊಡಗಿಸಿದೆ ?

ಆ) ಚಾಲ್ತಿ ಬಂಡವಾಳ (ವರ್ಕಿಂಗ್ ಕ್ಯಾಪಿಟಲ್) ವನ್ನು ಪಡೆಯದೆ ರೋಗಗ್ರಸ್ತಗೊಂಡ ಉದ್ದಿಮೆಗಳ ಸಂಖ್ಯೆ ಎಷ್ಟು ?

ಇ) ಮೇಲ್ಕಂಡ ಉದ್ದಿಮೆಗಳಲ್ಲಿ ವಾಣಿಜ್ಯ ಬ್ಯಾಂಕುಗಳಿಂದ ಚಾಲ್ತಿ ಬಂಡವಾಳ ಹೊಂದಿದ್ದು ಮತ್ತು ಹೊಂದದ ಉದ್ದಿಮೆಗಳ ಸಂಖ್ಯೆ ಎಷ್ಟು ?

ಈ) ವಿದ್ಯುತ್ ಪೂರೈಕೆಯ ಕೊರತೆಯ ಕಾರಣಗಳಿಂದ ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಹಣ ಪಡೆದ ಎಷ್ಟು ಉದ್ದಿಮೆಗಳು ರೋಗಗ್ರಸ್ತವಾಗಿವೆ. ಇದನ್ನು ಸುಧಾರಿಸಲು ಕೈಗೊಂಡ ನಿರ್ದಿಷ್ಟ ಕಾರ್ಯಕ್ರಮಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಹಣಕಾಸು ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಸ್ಥಾಪನೆಯಾದಂದಿನಿಂದ ೧೯೯೦ ರ ಫೆಬ್ರುವರಿ ಅಂತ್ಯದವರೆಗೆ ರಾಜ್ಯದಲ್ಲಿ ಒಟ್ಟು ೪೨,೫೬೦ ಖಾತೆಗಳಿಗೆ (ಸುಮಾರು ೫೦ ೦೦೦ ಉದ್ದಿಮೆಗಳಿಗೆ) ೭೭೯.೮೦ ಕೋಟಿ ರೂಪಾಯಿಗಳ ಸಾಲ ವಿತರಣೆ ಮಾಡಿದೆ.